**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಹಾಸನದಲ್ಲಿ "ನೋ-ಫ್ರಿಲ್" ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣವನ್ನು ನಿರ್ಮಾಣ ಮಾಡುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:** ಸರ್ಕಾರದ ಆದೇಶ ಸಂಖ್ಯೆ: ಮೂಅಇ 16 ರಾಅವಿ 2003, ದಿನಾಂಕ: 30.03.2007.

****

**ಪ್ರಸ್ತಾವನೆ:**

ಮೇಲೆ ಓದಲಾದ ಸರ್ಕಾರಿ ಆದೇಶದನ್ವಯ ಕರ್ನಾಟಕ ಸರ್ಕಾರವು ಹಾಸನದ ರಾಷ್ಟ್ರೀಯ ಹೆದ್ದಾರಿ-75ರಲ್ಲಿನ ಭುವನಹಳ್ಳಿಯ ಸಮೀಪ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸುವ ಚಟುವಟಿಕೆಯ ಕಾರ್ಯವನ್ನು ಲೋಕೋಪಯೋಗಿ ಇಲಾಖೆಯವತಿಯಿಂದ ಪ್ರಾರಂಭಿಸಲಾಯಿತು.

2. ಕರ್ನಾಟಕ ಸರ್ಕಾರವು ಸಾರ್ವಜನಿಕ-ಖಾಸಗಿ ಸಹಭಾಗಿತ್ವದ (PPP) ಆಧಾರದ ಮೇಲೆ ಮೆ: ಜೂಪಿಟರ್ ಏವಿಯೇಷನ್ ಪ್ರೈ. ಲಿ., ರವರನ್ನು ಅಭಿವೃದ್ಧಿದಾರರನ್ನಾಗಿ (ಸ್ಪರ್ಧಾತ್ಮಕ ಬಿಡ್ ಪ್ರಕ್ರಿಯೆಯ ಮೂಲಕ) ಆಯ್ಕೆ ಮಾಡುವ ಮೂಲಕ ಯೋಜನೆಯನ್ನು ಕೈಗೆತ್ತಿಕೊಂಡಿತು. ಅದರಂತೆ, ಆಯ್ಕೆಯಾದ ಅಭಿವೃದ್ಧಿದಾರರೊಂದಿಗೆ (ಮೆ: ಜೂಪಿಟರ್ ಏವಿಯೇಷನ್ ಪ್ರೈ. ಲಿ.,) ದಿನಾಂಕ:13.07.2007 ರಂದು ಒಪ್ಪಂದಕ್ಕೆ ಸಹಿ ಮಾಡಿ ನಂತರ ಒಪ್ಪಿಗೆ ಪತ್ರವನ್ನು ಸಹ ನೀಡಲಾಗಿರುತ್ತದೆ. ಕರ್ನಾಟಕ ಸರ್ಕಾರವು ಈ ಯೋಜನೆಯ ಉದ್ದೇಶಕ್ಕಾಗಿ 761 ಎಕರೆಗಳಲ್ಲಿ 536 ಎಕರೆಗಳ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅಭಿವೃದ್ಧಿಗಾಗಿ ಹಸ್ತಾಂತರಿಸಲಾಗಿತ್ತು.

3. ಒಪ್ಪಂದಕ್ಕೆ ಸಹಿ ಮಾಡಿದ 24 ತಿಂಗಳ ಒಳಗಾಗಿ ಅಂದರೆ ದಿನಾಂಕ:06.09.2009ರೊಳಗೆ ಮೆ:ಜೂಪಿಟರ್ ಏವಿಯೇಷನ್ ಪ್ರೈ.ಲಿ, (JAPL) ಸಂಸ್ಥೆಯು ವಿಮಾನ ನಿಲ್ದಾಣವನ್ನು ಪ್ರಾರಂಭಿಸಬೇಕಾಗಿತ್ತು. ಆದರೆ ಅಭಿವೃದ್ಧಿದಾರರು ಅಗತ್ಯವಾದ ಪೂರ್ಣ ಭೂಮಿಯನ್ನು ಹಸ್ತಾಂತರಿಸದ ಕಾರಣಗಳನ್ನು ನೀಡಿ ಕಾಮಗಾರಿಯನ್ನು ಕೈಗೆತ್ತಿಕೊಂಡಿರುವುದಿಲ್ಲ.

4. ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರವು ದಿನಾಂಕ:27.10.2014 ಹಾಗೂ 17.06.2015ರಂದು ನಡೆಸಿದ ಸ್ಥಳ ತಪಾಸಣೆಯಲ್ಲಿ ಅಭಿವೃದ್ಧಿದಾರರಿಗೆ ಈಗಾಗಲೇ ಹಸ್ತಾಂತರಿಸಲಾದ

ಭೂಮಿಯಲ್ಲಿ ATR-72 ಮಾದರಿಯ ವಿಮಾನಕ್ಕೆ ಸರಿಹೊಂದುವ ವಿಮಾನ ನಿಲ್ದಾಣವನ್ನು ಅಭಿವೃದ್ಧಿ ಪಡಿಸುವ ಕುರಿತು ಪ್ರಸ್ತಾಪಿಸಲಾಗಿರುತ್ತದೆ.

5. ಸರ್ಕಾರವು ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ನೀಡಿದ ಹಲವಾರು ಅವಕಾಶಗಳ ಹೊರತಾಗಿಯೂ ಅಭಿವೃದ್ಧಿದಾರರು ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ವಿಫಲರಾಗಿದ್ದರಿಂದ ಮೆ: JAPLರೊಂದಿಗಿನ ಒಪ್ಪಂದವನ್ನು ದಿನಾಂಕ:16.04.2019ರಂದು ಮುಕ್ತಾಯಗೊಳಿಸಿ, ಅಭಿವೃದ್ಧಿದಾರರಿಗೆ ಹಸ್ತಾಂತರಿಸಲಾದ ಜಮೀನನ್ನು ದಿನಾಂಕ:29.04.2019ರಂದು ಜಿಲ್ಲಾಡಳಿತ ಮೂಲಕ ಹಿಂದಕ್ಕೆ ಪಡೆದಿದೆ.

6. ರಾಜ್ಯ ಸರ್ಕಾರವು day VFR ಕಾರ್ಯಾಚರಣೆಗಳಿಗಾಗಿ "ನೋ ಫ್ರಿಲ್" ಗ್ರೀನ್ ಫೀಲ್ಡ್ ದೇಶೀಯ ಪ್ರಯಾಣಿಕರ ವಿಮಾನ ನಿಲ್ದಾಣವನ್ನು ಕರ್ನಾಟಕದ ಹಾಸನ ಜಿಲ್ಲೆಯ ಭುವನಹಳ್ಳಿಯಲ್ಲಿ ಅಭಿವೃದ್ಧಿಪಡಿಸಲು ಇಚ್ಛಿಸಿದ್ದು, ಮುಂದಿನ ದಿನಗಳಲ್ಲಿ ಬೇಡಿಕೆಗನುಸಾರವಾಗಿ ವಿಮಾನ ನಿಲ್ದಾಣವನ್ನು ವಿಸ್ತರಣೆ ಮತ್ತು ಮೇಲ್ದರ್ಜೆಗೇರಿಸಬಹುದು ಮತ್ತು ಒಂದು ಕಾರ್ಗೋ ಟರ್ಮಿನಲ್ ಅವಶ್ಯಕತೆಯನ್ನು ಸಹ ಪರಿಶೀಲಿಸಬಹುದಾಗಿದೆ.

7. ಕಲಬುರಗಿ ವಿಮಾನ ನಿಲ್ದಾಣದ ಮಾದರಿಯಲ್ಲಿಯೇ ಹಾಸನ ವಿಮಾನ ನಿಲ್ದಾಣದ ಅಭಿವೃದ್ಧಿಯನ್ನು ಕೈಗೊಳ್ಳುವ ಕುರಿತು ತಾಂತ್ರಿಕ ಸಲಹಾ ಸೇವೆಗಳನ್ನು ಒದಗಿಸಲು ಅನುವಾಗುವಂತೆ ಕೆ.ಟಿ.ಪಿ.ಪಿ. ಕಾಯ್ದೆಯ ಕಲಂ 4(ಜಿ) ಅಡಿಯಲ್ಲಿ ವಿನಾಯಿತಿಯನ್ನು ಪಡೆದು ಮೆ:ರೈಟ್ಸ್ (ಭಾರತ ಸರ್ಕಾರದ ಒಂದು ಉದ್ಯಮ) ಸಂಸ್ಥೆಯೊಂದಿಗೆ ದಿ:23.04.2019ರಂದು ಒಪ್ಪಂದ ಮಾಡಿಕೊಳ್ಳಲಾಗಿದೆ.

8. ಮೇಲಿನ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**<u>ಸರ್ಕಾರದ ಆದೇಶ ಸಂಖ್ಯೆ. ಮೂಅಇ 47 ರಾಅವಿ 2018,</u>**

**<u>ಬೆಂಗಳೂರು, ದಿನಾಂಕ:07.06.2019</u>**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಸನ ವಿಮಾನ ನಿಲ್ದಾಣ ನಿರ್ಮಾಣದ ಕುರಿತು ಈ ಕೆಳಕಂಡ ಅಂಶಗಳಿಗೆ ಸರ್ಕಾರವು ಅನುಮೋದನೆಯನ್ನು ನೀಡಿದೆ.

ಅ) ಯೋಜನೆಯನ್ನು ಅಭಿವೃದ್ಧಿಪಡಿಸಲು ಈ ಮೊದಲು ಆಯ್ಕೆ ಮಾಡಲಾದ ಅಭಿವೃದ್ಧಿದಾರರಾದ ಮೆ: ಆಕ್ಸಿಸ್‌ಕೇಡ್ಸ್ (ಹಿಂದಿನ ಹೆಸರು ಮೆ: ಜೂಪಿಟರ್ ಏವಿಯೇಷನ್ಸ್ ಪ್ರೈವೇಟ್ ಲಿಮಿಟೆಡ್)ರವರೊಂದಿಗೆ ಮಾಡಿಕೊಂಡಿರುವ ಒಪ್ಪಂದವನ್ನು ಅಂತ್ಯಗೊಳಿಸಲು ತೆಗೆದುಕೊಂಡ ಕ್ರಮಕ್ಕೆ ಘಟನೋತ್ತರ ಅನುಮೋದನೆ.

ಆ) ಮೆ: ರೈಟ್ಸ್ ಸಂಸ್ಥೆಯವರಿಂದ ತಾಂತ್ರಿಕ ಸಹಾಯ ಮತ್ತು ಮೂರನೇ ವ್ಯಕ್ತಿ ಪರಿವೀಕ್ಷಣಾ (ಪಿಎಂಸಿ ಸೇವೆಗಳು) ಸೇವೆಗಳನ್ನು ಪಡೆದುಕೊಳ್ಳಲು ತೆಗೆದುಕೊಂಡಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ.

ಇ) ಎಎಐ ಮತ್ತು ಕರ್ನಾಟಕ ಸರ್ಕಾರದ ನಡುವಿನ ಪ್ರಸ್ತಾಪಿತ Joint Venture Company ಮೂಲಕ ಎಎಐನೊಂದಿಗೆ ಹಾಸನ ವಿಮಾನ ನಿಲ್ದಾಣದ ಅಭಿವೃದ್ಧಿ ಮತ್ತು ಕಾರ್ಯಾಚರಣೆಯನ್ನು ಕೈಗೊಳ್ಳಲು.

ಈ) ಒಂದು ವೇಳೆ ಕಾರ್ಯಸಾಧ್ಯತೆಯ ಆಧಾರದ ಮೇಲೆ ಎಎಐ ಅಥವಾ Joint Venture Companyಯು ಈ ವಿಮಾನ ನಿಲ್ದಾಣದ ಕಾರ್ಯವನ್ನು ಕೈಗೆತ್ತಿಕೊಳ್ಳಲು ಒಪ್ಪದಿದ್ದಲ್ಲಿ, ಕರ್ನಾಟಕ ಲೋಕೋಪಯೋಗಿ ಇಲಾಖೆಯ ಮೂಲಕ ಹಾಸನ ವಿಮಾನ ನಿಲ್ದಾಣದ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು.

ಉ) ಭವಿಷ್ಯದ ಬೇಡಿಕೆಗಳ ಆಧಾರದ ಮೇಲೆ 'ನೋ-ಫ್ರಿಲ್' ಗ್ರೀನ್‌ಫೀಲ್ಡ್ ದೇಶೀಯ ಪ್ರಯಾಣದ ವಿಮಾನ ನಿಲ್ದಾಣವನ್ನು ಹಂತ ಹಂತವಾಗಿ (modular basis) ಅಭಿವೃದ್ಧಿಪಡಿಸಲು.

ಊ) ಮೆ: ರೈಟ್ಸ್ ಸಂಸ್ಥೆಯು ಸಿದ್ಧಪಡಿಸಿರುವ ವಿಸ್ತೃತ ಯೋಜನೆ (Master plan)ಗೆ ಮೆ:ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾರವರಿಂದ ತಾತ್ವಿಕ ಅನುಮೋದನೆ ಪಡೆಯುವುದು.

ಋ) ಕಲಬುರಗಿ ವಿಮಾನ ನಿಲ್ದಾಣದ ಮಾದರಿಯಲ್ಲಿಯೇ, ಆ ನಿಲ್ದಾಣಕ್ಕೆ ಒದಗಿಸಿರುವ ಸೌಲಭ್ಯಗಳಂತೆಯೇ ಹಾಸನ ವಿಮಾನ ನಿಲ್ದಾಣ (Green Field Domestic Passenger Airport)ವನ್ನು ಅಭಿವೃದ್ಧಿಗೊಳಿಸಲು ಅಂದಾಜನ್ನು ತಯಾರಿಸಿ ಆಡಳಿತಾತ್ಮಕ ಅನುಮೋದನೆಗೆ ಸಚಿವ ಸಂಪುಟಕ್ಕೆ ಮಂಡಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Sd/-

**(ಬಿ.ಎಸ್.ಮಂಜುನಾಥ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

**ಪ್ರತಿ:**

1. ಪ್ರಧಾನ ಮಹಾಲೇಖಪಾಲರು (ಆಡಿಟ್ –1, 2, 3/ A & E), ಪ್ರಧಾನ ಮಹಾಲೇಖಪಾಲರ ಕಛೇರಿ (ಕರ್ನಾಟಕ), ಎ.ಎ.ಡಿ. ಸೆಕ್ಷನ್, ಮೈನ್ ಬಿಲ್ಡಿಂಗ್, ಕೆ.ಪಿ.ಎಸ್.ಸಿ. ಕಛೇರಿ ಎದುರು, ಬೆಂಗಳೂರು –01.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ, ಖನಿಜಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.

4. ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ.

5. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, (ಸಚಿವ ಸಂಪುಟ ಸಂಖ್ಯೆ;298/2019) ವಿಧಾನಸೌಧ, ಬೆಂಗಳೂರು
6. ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾಸನ ವೃತ್ತ, ಹಾಸನ.
7. ಗ್ರೂಪ್ ಜನರಲ್ ಮ್ಯಾನೇಜರ್/ಏರ್‌ಪೋರ್ಟ್ಸ್, ಮೆ॥ರೈಟ್ಸ್ ಆ.ರೈಟ್ಸ್ ಭವನ್, ನಂ.1, ಸೆಕ್ಟಾರ್-29, ಗುರ್‌ಗಾವ್ – 122 001.
8. ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ. ಗೋಪುರ, ಬೆಂಗಳೂರು.
9. ಹಿರಿಯ ನಿರ್ದೇಶಕರು, ಯೋಜನೆ ಹಾಗೂ ಸಂಪನ್ಮೂಲ ವಿಭಾಗ, ಯೋಜನೆ ಇಲಾಖೆ, ಬೆಂಗಳೂರು.
10. ನಿರ್ದೇಶಕರು, PM & I ವಿಭಾಗ, ಯೋಜನಾ ಇಲಾಖೆ.
11. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
12. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ. ಖನಿಜ ಭವನ, ಬೆಂಗಳೂರು,
13. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1), ವಿಧಾನಸೌಧ, ಬೆಂಗಳೂರು.
14. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
15. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
16. ಸರ್ಕಾರದ ಉಪ ಕಾರ್ಯದರ್ಶಿ-1, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ. ವಿಕಾಸಸೌಧ, ಬೆಂಗಳೂರು.
17. ಸರ್ಕಾರದ ಅಧೀನ ಕಾರ್ಯದರ್ಶಿ, ಸಮನ್ವಯ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
17. ಶಾಖಾ ರಕ್ಷಾ ಕಡತ/ಬಿಡಿ ಪ್ರತಿಗಳು.

****